## ಉತ್ಪಾದನೆ ಎಲ್ಲಿ?

ಚಿನ್ನದ ಉತ್ಪಾದನೆ ಹಾಗೂ ರಫ್ತು ವ್ಯವಹಾರದಲ್ಲಿ ತೊಡಗಿಕೊಂಡಿರುವ ದೇಶಗಳು ಕೆಲವೇ ಕೆಲವು. ಉತ್ಪಾದಿಸುವ ರಾಷ್ಟ್ರಗಳು ತಮ್ಮ ಚಿನ್ನವನ್ನು ತಾವೇ ಖರೀದಿ ಕೂಡಾ ಮಾಡುತ್ತವೆ. ಆದರೆ ಸಾಂಪ್ರದಾಯಿಕವಾಗಿ ಚಿನ್ನ ಅಷ್ಟೇನೂ ಪ್ರಮುಖವಲ್ಲದ ದೇಶಗಳು ಚಿನ್ನವನ್ನು ಬೇರೆ ದೇಶಗಳಿಗೆ ಮಾರಿ ಲಾಭ ಮಾಡಿಕೊಳ್ಳುತ್ತವೆ.

ಚಿನ್ನವನ್ನು ಉತ್ಪಾದಿಸುವ ಪ್ರಮುಖ ರಾಷ್ಟ್ರಗಳು -- ಚೀನಾ, ಆಸ್ಟ್ರೇಲಿಯಾ, ರಷ್ಯಾ, ಅಮೆರಿಕ, ಕೆನಡಾ, ಪೆರು, ದಕ್ಷಿಣ ಆಫ್ರಿಕಾ, ಮೆಕ್ಸಿಕೋ, ಉಜ್ಬೆಕಿಸ್ತಾನ ಮತ್ತು ಇಂಡೋನೇಷ್ಯಾ. ಇದರಲ್ಲಿ ಚೀನಾ ವರ್ಷಕ್ಕೆ 440 ಮೆಟ್ರಿಕ್ ಟನ್ ಚಿನ್ನ ಉತ್ಪಾದಿಸಿದರೆ, ಪಟ್ಟಿಯ ಕೊನೆಯಲ್ಲಿರುವ ಇಂಡೋನೇಷ್ಯಾ 80 ಮೆಟ್ರಿಕ್ ಟನ್ ಚಿನ್ನ ಉತ್ಪಾದಿಸುತ್ತದೆ.

ಇರುವ ಶಕ್ತಿ ಇರುವುದಿಲ್ಲ ಎನ್ನುವುದೂ ಸರ್ವವಿದಿತ. ಒಳಗಿನಿಂದ ಚಿನ್ನವಾಗಿರಬೇಕಾದರೆ ಮಣ್ಣಿನಲ್ಲಿ ಸೇರಿ ಶತಶತಮಾನಗಳಿಂದ ಭೂಗರ್ಭದಲ್ಲಿ ಬೇರೆ ಲೋಹಗಳಿಗಿಂತ ಪ್ರತ್ಯೇಕ ಗುರುತು ಉಳಿಸಿಕೊಂಡಿರಬೇಕು. ನಂತರ ಗಣಿಯ ಮಣ್ಣನ್ನು ತೆಗೆದು ಸೋಸಿದಾಗ ಕೈಗೂಡುವ ಚಿನ್ನ ಅಪರಂಜಿ ಅಂತೆಲ್ಲ ಕರೆಸಿಕೊಳ್ಳುತ್ತದೆ. ಇದರಲ್ಲೂ ಲೋಹ ಬಹಳ ಕಡಿಮೆ ಪ್ರಮಾಣದ್ದು. ಅದು ಬಹಳ ಮೆದುವೂ ಆಗಿರುತ್ತದೆ. ಅದಕ್ಕೆ ಸೂಕ್ತವಾದ ಪ್ರಮಾಣದಲ್ಲಿ ವಿವಿಧ ಲೋಹಗಳನ್ನು ಸೇರಿಸಿ ಗಟ್ಟಿಯಾಗಲು ಅಣಿ ಮಾಡಲಾಗುತ್ತದೆ. ಬಳಿಕ ಅದನ್ನು ಎಷ್ಟು ತೆಳ್ಳಗೆ ಬಡಿದರೂ ಅಥವಾ ಕೊರೆದರೂ ಅದು ಮುರಿಯುವ ಸಾಧ್ಯತೆ ಇಲ್ಲವೇ ಇಲ್ಲ. ಕಾಲಾಂತರದಲ್ಲಿ ಮನುಷ್ಯರ ಮೈ ಮೇಲೆ ಧರಿಸಿದ ಬಂಗಾರ ಸವೆಯುತ್ತದೆ ಅಥವಾ ಬಲಪ್ರಯೋಗದಿಂದ ಎಳೆದಾಗ ಸೂಕ್ಷ್ಮ ಕೊಂಡಿಗಳಿರುವಲ್ಲಿ ತುಂಡಾಗಬಹುದು, ಅಷ್ಟೆ.

ಚಿನ್ನದ ವಿಪರ್ಯಾಸವೆಂದರೆ, ಒಂದು ಉಪಮೆಯಾಗಿ ಪರಿಗಣನೆ ಆಗಬೇಕಿದ್ದರೆ ಅದು ಧಾರಣಾ ಶಕ್ತಿಗೆ ಹೆಚ್ಚು ಸೂಕ್ತವೇ ಹೊರತು ಅಲಂಕಾರಕ್ಕಲ್ಲ. ಚಿನ್ನ ತನ್ನಂತೆಯೇ ದುಡಿಮೆಗೊಳಗಾಗುವ ಬಡವನ ಕೈ ಸೇರುವುದು ಅಪರೂಪ. ಶ್ರೀಮಂತರ, ದುಡ್ಡುಳ್ಳವರ ಮೊದಲ ಚಿನ್ಹೆಯಾಗಿ ಟನ್‌ಗಟ್ಟಲೆ ಬಂಗಾರ ಭೂಮಿಯಿಂದ ನಿರ್ಗಮಿಸಿ ಮನೆಗೆ ಬಂದು ಮತ್ತೆ ಚಂದದ ಪೆಟ್ಟಿಗೆಯಲ್ಲಿ ಕೂತು ಲೋಹದ ಗೋಡೆಗಳ ನಡುವೆ ಬಂಧಿಯಾಗುತ್ತದೆ. ಇದು ಬಂಗಾರದ ಪ್ರಯಾಣದ ಒಂದು ಮಾದರಿ. ಒಂದು ಗುಹೆಯಿಂದ ಇನ್ನೊಂದು ಗುಹೆಗೆ. ಪ್ರಕೃತಿಯಿಂದ ಹೊರಟು ಮನುಷ್ಯನ ಬಂಧನಕ್ಕೆ ಒಳಗಾಗಿ ಚಿನ್ನ ಸದಾ ಪ್ರಯಾಣಿಸುತ್ತಲೇ ಇರುತ್ತದೆ. ಇದು ಎಂದೂ ಮುಗಿಯದ ಪ್ರಯಾಣ.

ಭಾರತದಲ್ಲಿ ಶ್ರೀಮಂತಿಕೆಯ ಕುರುಹಾದ ಚಿನ್ನಕ್ಕೆ ಅಗ್ರಸ್ಥಾನ. 'ಫೋರ್ಬ್ಸ್' ಪಟ್ಟಿಯ ಪ್ರಕಾರ ಭಾರತ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಚಿನ್ನದ ಸಂಗ್ರಹವುಳ್ಳ ಹತ್ತು ದೇಶಗಳಲ್ಲಿ ಒಂದು. ಜಗತ್ತಿನ ದೊಡ್ಡಣ್ಣನಾದ ಅಮೆರಿಕಾ, ಚಿನ್ನದ ಸಂಗ್ರಹದಲ್ಲಿ ಅತ್ಯಂತ ಮುಂದಿದೆ. ಮುಂದುವರೆಯುವ ದೇಶಗಳ ಪಟ್ಟಿಯಿಂದ 'ಮುಂದುವರೆದ' ದೇಶಗಳ ಪಟ್ಟಿಗೆ ಹಾರುವ ಕನಸಿನಲ್ಲೇ ದಶಮಾನಗಳಿಂದ ಕಾಲ ಹಾಕುತ್ತಿರುವ ಭಾರತವೂ ಚಿನ್ನದ ಅತ್ಯಂತ ದೊಡ್ಡ ಸಂಗ್ರಹ ಹೊಂದಿದೆ.

### ಒಲವಿಗೆ ಕಾರಣವೇನು?

ಭಾರತೀಯರಲ್ಲಿ ಬಂಗಾರದ ಬಗ್ಗೆ ಒಲವು ಬೆಳೆಯಲು ಸಾಕಷ್ಟು ಕಾರಣಗಳಿವೆ. ಸಾಂಪ್ರದಾಯಿಕ ಸಂದರ್ಭಗಳಲ್ಲಿ ಬಂಗಾರ–ಬೆಳ್ಳಿಗೆ ಇರುವ ಮಹತ್ವ, ಬಂಗಾರ ಖರೀದಿ ಶುಭ ಸೂಚಕವೆಂದು ಪರಿಗಣಿತವಾಗುವ ಹಬ್ಬ–ಹರಿದಿನಗಳು, ದೋಷಮುಕ್ತ ಲೋಹವೆಂಬ ನಂಬಿಕೆ, ಇದರ 'ಅಪರೂಪ'ತನ ಇತ್ಯಾದಿ.

ಇದಲ್ಲದೆ ಬೇರೆ ಕಾರಣಗಳನ್ನು ನೋಡಬೇಕಾದರೆ ಆರ್ಥಿಕ ಬಿಕ್ಕಟ್ಟಿನಿಂದ ಹೊರಬಂದ ದೇಶಕ್ಕೆ ಬಂಗಾರ ಖರೀದಿ ದೊಡ್ಡ ಸವಾಲಾಗಬೇಕಿತ್ತು. ಆದರೆ ಅಮೆರಿಕದಂತೆ ಇಲ್ಲಿ ರಿಯಲ್ ಎಸ್ಟೇಟ್ ಉಳಿತಾಯ ಅಥವಾ ಅಭಿವೃದ್ಧಿ ಹೂಡಿಕೆಯ ಮುಖ್ಯ ಭಾಗವಾದರೂ, ಮೊದಲ 'ಆಪದ್ಧನ'ದ ಆದ್ಯತೆ ಬಂಗಾರಕ್ಕೇ ಎನ್ನುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಎಂತಹ ಬಡವರಾದರೂ ಗಂಜಿಗಾಗಿ ಗುಂಜಿ ಬಂಗಾರ ಉಳಿಸಿಕೊಂಡೇ ಇರುತ್ತಾರೆ ಎನ್ನುವುದು ನಮ್ಮ ಸಮಾಜದ ಸತ್ಯ. ಹಾಗಾಗಿಯೇ ಭಾರತದ ಬಂಗಾರದ ಮೇಲಿನ ಆಸೆ ವರ್ಷ ಕಳೆದಂತೆ ಹೆಚ್ಚುತ್ತಲೇ ಇದೆ.

ನಮ್ಮ ಬಂಗಾರದ ಮೋಹಕ್ಕೂ, ವ್ಯಾಪಾರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಉದಾಹರಣೆಗೆ ಕೊಲ್ಲಿ ರಾಷ್ಟ್ರಗಳಲ್ಲಿ ಹೇರಳ ಬಂಗಾರ ಮಾರುಕಟ್ಟೆಯಲ್ಲಿ ದೊರಕುತ್ತದೆ. ದುಬೈ ಜಗತ್ತಿನಲ್ಲೇ ಅತಿ ದೊಡ್ಡದು ಎನ್ನಲಾದ ಚಿನ್ನದ ಮಾರುಕಟ್ಟೆಯನ್ನು ಹೊಂದಿದೆ. ಆದರೆ ಅಲ್ಲಿ ವ್ಯಾಪಾರ ಆಗುತ್ತದೆಯೇ ಜನ ಮೈಮೇಲೆ ಹೇರಿ ಅಥವಾ ಪೆಟ್ಟಿಗೆಗಳಲ್ಲಿ ಕೂಡಿಹಾಕಿ ಬದುಕುವುದಿಲ್ಲ. ಅವರು ರಿಯಲ್ ಎಸ್ಟೇಟ್ ಮೇಲೆ ಹೂಡುವ ಬಂಡವಾಳಕ್ಕಿಂತ ಚಿನ್ನದ ಮೇಲಿನ ಹೂಡಿಕೆ ತೀರಾ ಕಡಿಮೆ ಇದೆ. ಅಲ್ಲಿ ಅದೊಂದು

